# ಸೆಲೆಬ್ರಿಟಿ

■ ಹನಿ

## ಮದ್ರಾಸ್ ಮಾಂತ್ರಿಕ

ವಾರಗಳ ಹಿಂದೆಯಷ್ಟೇ ನಡೆದ ಲಂಡನ್ ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭಕ್ಕೆ 'ಮದ್ರಾಸ್ ಮಾಂತ್ರಿಕ' ಎ.ಆರ್.ರೆಹಮಾನ್ ಹೊಸೆದ 'ನಿಮ್ಮ ನಿಮ್ಮ..' ಎಂಬ ಪಂಜಾಬಿ ಟ್ರ್ಯಾಕ್ ಸ್ವರ–ರಾಗಗಳು ಯಾರ ಗಮನಕ್ಕೆ ಬಂತೋ ಗೊತ್ತಿಲ್ಲ; ಅಂತೂ ಒಲಿಂಪಿಕ್ಸ್‌ನಲ್ಲಿ ನಮ್ಮವರೊಬ್ಬರ ಸಂಗೀತ ಇತ್ತು ಎನ್ನುವುದಂತೂ ದಾಖಲೆಯಾಯಿತು. ರೆಹಮಾನ್ ಸಂಗೀತ ಎಂದರೆ ಅಲ್ಲಿ ವಾದ್ಯಗಳ ವಿಶಿಷ್ಟ ಸದ್ದು ಮತ್ತು ಕೇಕೆ ಧ್ವನಿಗಳು ಸಾಮಾನ್ಯ. ಡ್ಯಾನಿ ಬೋಯ್ಲ್‌ಯ ಒಟ್ಟಾರೆ ನಿರ್ದೇಶನದ ಕಾರ್ಯಕ್ರಮದಲ್ಲಿ ರೆಹಮಾನ್ ಸ್ವರಗಳು ಪ್ರತ್ಯೇಕವಾಗಿ ಕೇಳಿಸಲಿಲ್ಲ ಎನ್ನುವುದೂ ನಿಜವೇ. ಅದೇನೇ ಇದ್ದರೂ ರೆಹಮಾನ್ ಈಗ ಅಂತರರಾಷ್ಟ್ರೀಯ ಹೆಸರು. 400 ಕೋಟಿ ಜನ ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭದಲ್ಲಿ ರೆಹಮಾನ್ ಹಾಡು ಕೇಳಿಸಿಕೊಂಡಿದ್ದಾರೆ!



ಅಷ್ಟಿದ್ದೂ ಈತ ಹುಟ್ಟೂರು ಚೆನ್ನೈನ ಮೋಹ ತೊರೆದಿಲ್ಲ. ಅಲ್ಲೂ ಸಖತ್ ಬ್ಯುಸಿ! ತಮಿಳು ಚಿತ್ರರಂಗದ ಸೂಪರ್‌ಸ್ಟಾರ್ ನಿರ್ದೇಶಕರಿಗೆಲ್ಲ ರೆಹಮಾನ್ ಸಂಗೀತವೇ ಬೇಕು. ರಜನಿಕಾಂತ್‌ನ 'ಕೋಚಡಯ್ಯನ್', ಮಣಿರತ್ನಂ ಅವರ 'ಕಾದಲ್', ಶಂಕರ್ ಅವರ 'ಐ', ಗೌತಮ್ ವಾಸುದೇವ ಮೆನನ್ ಅವರ 'ಯೊಹಾನ್ ಅಧ್ಯಾಯಂ ಒಂಡ್ರು'– ಹೀಗೆ ಎಲ್ಲ ಚಿತ್ರಗಳಿಗೂ ರೆಹಮಾನ್ ಸಂಗೀತ. ಈ ಮಧ್ಯೆ ಹಿಂದಿಯಲ್ಲಿ ಸಂಗೀತ ನೀಡಿದ 'ರಾಕ್‌ಸ್ಟಾರ್' ಬೇರೆ ಹಲವು ಏಷ್ಯನ್ ಪ್ರಶಸ್ತಿಗಳನ್ನು ಗೆಲ್ಲುವ ಹೊಸ್ತಿಲಲ್ಲಿದೆ.

ಅಮೆರಿಕನ್ ಸಾಹಸಿ ಚಾರಣಿಗನೊಬ್ಬ ಬಂಡೆಯ ಸಂದಿಯಲ್ಲಿ 127 ಗಂಟೆಗಳ ಕಾಲ ಸಿಕ್ಕು ಬಿದ್ದು ಒದ್ದಾಡುವ ಕಥೆಯುಳ್ಳ '127 ಅವರ್ಸ್' ಎಂಬ ಉಸಿರು ಬಿಗಿ ಹಿಡಿದು ನೋಡಬೇಕಾದ ಚಿತ್ರಕ್ಕೆ ರೆಹಮಾನ್ ನೀಡಿದ ಸಂಗೀತ ಹಾಲಿವುಡ್‌ನಲ್ಲೂ ಸಂಚಲನ ಮೂಡಿಸಿದೆ. ಒಲಿಂಪಿಕ್ಸ್ ಉದ್ಘಾಟನೆಗೆ ರೆಹಮಾನ್ ಹೆಸರು ಆಯ್ಕೆಯಾಗಲು ಅದೂ ಕಾರಣವಂತೆ. ಇತ್ತೀಚೆಗಷ್ಟೇ ಬಿಡುಗಡೆಯಾದ ಹಾಲಿವುಡ್ ಸಿನಿಮಾ 'ಪೀಪಲ್ ಲೈಕ್ ಅಸ್'ನಲ್ಲೂ ರೆಹಮಾನ್ ಹಿನ್ನೆಲೆ ಸಂಗೀತ ಸುದ್ದಿ ಮಾಡಿದೆ. ಇದೀಗ ಬಾಲಿವುಡ್ ಟಾಪ್ ತಾರೆ ಕತ್ರೀನಾ ಕೈಫ್ ಕೈಯಲ್ಲೂ ಹಾಡಿಸುವ ಸಾಹಸಕ್ಕೆ ರೆಹಮಾನ್ ಮುಂದಾಗಿದ್ದಾರೆ. ಯಶ್‌ರಾಜ್ ಫಿಲಂಸ್‌ನ ಹೊಸ ಚಿತ್ರದಲ್ಲಿ ಗುಲ್ಜಾರ್ ಬರೆದಿರುವ ಹಾಡನ್ನು ಕತ್ರೀನಾ ಹಾಡಿದ್ದು ಚೆನ್ನಾಗಿ ಮೂಡಿ ಬಂದಿದೆಯಂತೆ. ಕಳೆದ ತಿಂಗಳು ರೆಹಮಾನ್‌ರ 'ನರ್ಸರಿ ರೈಮ್ಸ್' ಆಲ್ಬಂ ಒಂದಕ್ಕೂ ಕತ್ರೀನಾ ಹಾಡಿದ್ದುಂಟು.

ಈ ಮಧ್ಯೆ, 46ರ ಹರೆಯದ ರೆಹಮಾನ್‌ರ ಇನ್ನಷ್ಟು ಸಾಹಸಗಳು ರೆಕ್ಕೆ ಬಿಚ್ಚಿಕೊಂಡಿವೆ. ಶೇಖರ್ ಕಪೂರ್ ಜತೆ ಸೇರಿ ರೆಹಮಾನ್ ರೂಪಿಸಿರುವ 'ಡಿಜಿಟಲ್ ಮೀಡಿಯಾ ಕಂಪೆನಿ'ಯಲ್ಲಿ ಶೇಕಡಾ 17ರಷ್ಟು ಷೇರುಗಳನ್ನು ಖರೀದಿಸಿರುವ ಸಿಸ್ಕೊ ಕಂಪೆನಿ 270 ದಶಲಕ್ಷ ರೂಪಾಯಿ ಹೂಡಿಕೆ ಮಾಡಿದೆ. ಅಮೆರಿಕದ ವಿಶ್ವವಿದ್ಯಾಲಯವೊಂದು (ಮಿಯಾಮಿ) ಇದೇ ಮೊದಲ ಬಾರಿಗೆ ರೆಹಮಾನ್‌ಗೆ ಗೌರವ ಡಾಕ್ಟರೇಟ್ ನೀಡಿದೆ. ಇದರೊಂದಿಗೆ ರೆಹಮಾನ್ ಪಡೆದ ಗೌರವ ಡಾಕ್ಟರೇಟ್‌ಗಳ ಸಂಖ್ಯೆ ನಾಲ್ಕಕ್ಕೇರಿದೆ!

## ಭರ್ಜರಿ ಖರೀದಿ

ರಿಯಲ್ ಎಸ್ಟೇಟ್ ಬಿದ್ದು ಹೋಗಿದೆ ಎನ್ನುವುದೆಲ್ಲ ಸುಳ್ಳು. ದೊಡ್ಡವರ ಮಟ್ಟದಲ್ಲಿ ಈಗಲೂ ದೊಡ್ಡ ವಹಿವಾಟುಗಳು ಸರಾಗವಾಗಿ ನಡೆಯುತ್ತಿವೆ. ಅದರಲ್ಲೂ ವಾಣಿಜ್ಯ ರಾಜಧಾನಿ ಮುಂಬೈಯಲ್ಲಿ ರಿಯಲ್ ಎಸ್ಟೇಟ್ ವಹಿವಾಟಿಗೆ ಯಾವ ಎಗ್ಗೂ ಇಲ್ಲ. 'ಉಕ್ಕು ಧಣಿ' ಎಂದೇ ಖ್ಯಾತಿ ಹೊಂದಿರುವ ಉದ್ಯಮಿ ಸಜ್ಜನ್ ಜಿಂದಾಲ್ ಕಳೆದ ವಾರ ದಕ್ಷಿಣ ಮುಂಬೈಯ ಪ್ರತಿಷ್ಠಿತ ಬಂಗಲೆ 'ಮಹೇಶ್ವರಿ ಹೌಸ್' ಅನ್ನು ಸುಮಾರು 500 ಕೋಟಿ ರೂಪಾಯಿ ಕೊಟ್ಟು ಖರೀದಿಸಿದ್ದಾರೆಂಬ ಸುದ್ದಿಯೇ ಇದಕ್ಕೆ ಸಾಕ್ಷಿ. ಭಾರತದ ಮಟ್ಟಿಗಂತೂ ಇದೊಂದು ಭಾರೀ ಖರೀದಿ!



ಮಹೇಶ್ವರಿ ಹೌಸ್, ಮುಂಬೈಯ ನೆಪೀನ್ ಸೀ ರೋಡ್‌ನಲ್ಲಿರುವ ಮೂರು ಅಂತಸ್ತಿನ ಸಮುದ್ರಮುಖಿ ಬಂಗಲೆ. ಸುಮಾರು ಒಂದು ಎಕರೆಯಷ್ಟು ಪ್ರದೇಶದಲ್ಲಿರುವ ಈ ಬಂಗಲೆಯನ್ನು ಮಹೇಶ್ವರಿ ಟ್ರಸ್ಟ್‌ನಿಂದ ಖರೀದಿಸಿರುವ ಸಜ್ಜನ್ ಜಿಂದಾಲ್, 2.7 ಶತಕೋಟಿ ಡಾಲರ್ ಮೌಲ್ಯದ ಜೆಎಸ್‌ಡಬ್ಲ್ಯು ಉದ್ಯಮ ಗುಂಪಿನ ಎಂ.ಡಿ ಮತ್ತು ಚೇರ್‌ಮನ್. 51ರ ಹರೆಯದ ಸಜ್ಜನ್ ಜಿಂದಾಲ್ ಬೆಂಗಳೂರಿನಲ್ಲೇ ಎಂಜಿನಿಯರಿಂಗ್ ಕಲಿತವರು. ಕುಟುಂಬದ ಉಕ್ಕು ಉದ್ಯಮದ ಖ್ಯಾತಿಯನ್ನು ಇನ್ನಷ್ಟು ವಿಸ್ತರಿಸಿರುವ ಸಜ್ಜನ್, ಕಳೆದ ವರ್ಷ ಮುಂಬೈಯಲ್ಲಿ ಬೆಲ್ಜಿಯಂ ಕಾನ್ಸುಲೇಟ್ ಕಚೇರಿ ಇದ್ದ ಮೊರೆನಾ ಹೌಸ್‌ಅನ್ನೂ ಸುಮಾರು 125 ಕೋಟಿಗೆ ಖರೀದಿಸಿದ್ದರಂತೆ. ಅದು ಶೀಘ್ರ 200 ಕೋಟಿಗೆ ಮಾರಾಟವಾಗಲಿದೆ ಎಂಬ ಸುದ್ದಿಯೂ ಇದೆ.

ನೆಪೀನ್ ಸೀ ರೋಡ್‌ನಲ್ಲಿ ಜಮೀನು ಭಾರೀ ದುಬಾರಿ. ಚದರ ಅಡಿಗೆ 85 ಸಾವಿರ ರೂಪಾಯಿ ಇದೆಯಂತೆ! ಈಗ ವಾಕೇಶ್ವರ್‌ನ ಜಿಂದಾಲ್ ಹೌಸ್ ಎಂಬ ಬಂಗಲೆಯಲ್ಲಿ ವಾಸವಿರುವ ಜಿಂದಾಲ್ ಕುಟುಂಬ, ಮಹೇಶ್ವರಿ ಭವನದ ಪಕ್ಕದಲ್ಲೇ 30 ಸಾವಿರ ಚದರ ಅಡಿಯ ಇನ್ನೊಂದು ಎರಡಂತಸ್ತಿನ ಬಂಗಲೆ ಕಟ್ಟಿದ ಬಳಿಕ ವಾಸವನ್ನು ಅಲ್ಲಿಗೇ ಬದಲಾಯಿಸಲಿದೆಯಂತೆ. ಉಕ್ಕು ಮಾತ್ರ ವಲ್ಲ, ಇಂಧನ, ಬಂದರು ಅಭಿವೃದ್ಧಿ, ಮೂಲ ಸೌಕರ್ಯ, ಸಾಫ್ಟ್‌ವೇರ್ ಮುಂತಾದ ಕ್ಷೇತ್ರಗಳಲ್ಲೂ ಹೂಡಿಕೆ ನಡೆಸಿರುವ ಸಜ್ಜನ್ ಜಿಂದಾಲ್ ಸದ್ಯ ವಿಶ್ವ ದಲ್ಲೇ ಮೂರನೆಯ ಅತಿದೊಡ್ಡ ಉಕ್ಕು ಉತ್ಪಾದಕ ಕಂಪೆನಿಯ ಒಡೆಯ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65